ಪ್ರಥಮ ದರ್ಜೆ ಕಾಲೇಜುಗಳು

276 : (234)

ಶ್ರೀ ಬಂಡೆಪ್ಪ ಖಾಶೆಂಪೂರ

ಅ) ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಹೊಸದಾಗಿ ಪ್ರಾರಂಭ ಮಾಡಲಾಗಿದೆಯೇ; (ವರ್ಷವಾರು ಮತ್ತು ವಿಧಾನಸಭಾವಾರು ಮಾಹಿತಿ ನೀಡುವುದು)

ಆ) ಹೊಸದಾಗಿ ಪ್ರಾರಂಭವಾದ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಮಂಜೂರಾದ ಉಪನ್ಯಾಸಕರು ಹಾಗೂ ಇತರೆ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಹಾಗೂ ವಿಧಾನಸಭಾವಾರು ಮಾಹಿತಿ ನೀಡುವುದು)

ಇ) ಹೊಸದಾಗಿ ಪ್ರಾರಂಭವಾದ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆಯೆ; ಇಲ್ಲದಿದ್ದಲ್ಲಿ ಒದಗಿಸದೆ ಇರಲು ಕಾರಣಗಳೇನು?(ಪೂರ್ಣ ಮಾಹಿತಿ ನೀಡುವುದು)

ಶ್ರೀ. ಸಿ.ಟಿ.ರವಿ

(ಮಾನ್ಯ ಉನ್ನತ ಶಿಕ್ಷಣ ಸಚಿವರು)

ಅ) 1) 2010–11ನೇ ಸಾಲಿನಲ್ಲಿ ಯಾವುದೇ ಕಾಲೇಜನ್ನು ಪ್ರಾರಂಭಿಸಿರುವುದಿಲ್ಲ.

2) 2011–12ನೇ ಸಾಲಿನಲ್ಲಿ ತುಮಕೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತುಮಕೂರು ನಗರದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸಲಾಗಿದೆ.

3) 2012–13ನೇ ಸಾಲಿನಲ್ಲಿ ಪಡುವಲಹಿಪ್ಪೆ ಸರ್ಕಾರಿ ಕಾನೂನು ಕಾಲೇಜನ್ನು ಪರಿವರ್ತಿಸಿ ತಿಳುವಳ್ಳಿ ಹಾನಗಲ್ ತಾಲ್ಲೂಕು ಹಾವೇರಿ ಜಿಲ್ಲೆ ಇಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸಲಾಗಿದೆ.

ಆ) ತುಮಕೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ 17 ಭೋದಕರ ಹಾಗೂ 13 ಭೋದಕೇತರ ಹುದ್ದೆಗಳು ಮಂಜೂರಾಗಿರುತ್ತದೆ. ತಿಳುವಳ್ಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ 15 ಭೋದಕರ ಹಾಗೂ 10 ಭೋದಕೇತರ ಹುದ್ದೆಗಳು ಮಂಜೂರಾಗಿರುತ್ತದೆ.

ಇ) ತುಮಕೂರು ಕಾಲೇಜಿನ ನೂತನ ಕಟ್ಟಡ ನಿರ್ಮಾಣಕ್ಕಾಗಿ ರೂ.350.00ಲಕ್ಷಗಳನ್ನು ಪ್ರಯೋಗಾಲಯ ಕಟ್ಟಡ ನಿರ್ಮಾಣಕ್ಕಾಗಿ ರೂ.60.00ಲಕ್ಷಗಳನ್ನು 2012–13ನೇ ಸಾಲಿನಲ್ಲಿ ಮಂಜೂರು ಮಾಡಲಾಗಿದೆ. ವಿಜ್ಞಾನ ಉಪಕರಣ ಮತ್ತು ಪೀಠೋಪಕರಣಗಳಿಗಾಗಿ ಹಾಗೂ ಪುಸ್ತಕ

ಖರೀದಿಗಾಗಿ ರೂ.1803000.00ಗಳನ್ನು ಮಂಜೂರು ಮಾಡಲಾಗಿದೆ. ತಿಳುವಳ್ಳಿ ಕಾಲೇಜಿನ ನೂತನ ಕಟ್ಟಡಕ್ಕಾಗಿ ರೂ.200.00ಲಕ್ಷಗಳನ್ನು ಮಂಜೂರು ಮಾಡಲಾಗಿದೆ.

ಸರ್ಕಾರಿ ಪಾಲಿಟೆಕ್ನಿಕ್ ಕಾರಟಗಿ ಇದರ ಶುಲ್ಕ ಪಾವತಿ

322 : (380)

ಶ್ರೀ ಶಿವರಾಜ್ ಸಂಗಪ್ಪ ತಂಗಡಗಿ

ಅ) ಕಾರಟಗಿಯ ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿಗೆ ತರಗತಿಗಳನ್ನು ನಡೆಸಲು ಲೀವ್ ಅಂಡ್ ಲೈಸನ್ಸ್ ಆಧಾರದ ಮೇಲೆ ಅನುಮತಿ ನೀಡಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದಲ್ಲಿ, ಸದರಿ ಸಂಸ್ಥೆಯವರಿಂದ ಡಿಸೆಂಬರ್ 2012ರ ಅಂತ್ಯಕ್ಕೆ ಲೀವ್ ಅಂಡ್ ಲೈಸನ್ಸ್ ಶುಲ್ಕ ಹಾಗೂ ಸೇವಾ ತೆರಿಗೆ ರೂ.14,51,091/–ಬಾಕಿ ಇದ್ದು ಇನ್ನೂ ಪಾವತಿ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ ಬಾಕಿ ಹಣವನ್ನು ಯಾವಾಗ ಪಾವತಿ ಮಾಡಲಾಗುವುದು?

ಶ್ರೀ. ಸಿ.ಟಿ.ರವಿ

(ಮಾನ್ಯ ಉನ್ನತ ಶಿಕ್ಷಣ ಸಚಿವರು)

ಅ) ಬಂದಿದೆ.

ಆ) ಬಂದಿದೆ.

ಇ) ಕಾರಟಗಿಯ ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಅಧೀನದಲ್ಲಿರುವ ಶ್ರಮಿಕ ಭವನ, ಭೋಜನ ಮತ್ತು ಪಾಕಶಾಲೆಗಳನ್ನು ಕಾರಟಗಿಯ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿಗೆ ಮಾಸಿಕ ಬಾಡಿಗೆ ಪಡೆಯಲಾಗಿದ್ದು ಬಾಡಿಗೆ ಪಾವತಿಸುವಂತೆ ದಿನಾಂಕ 2.2.2013ರ ಆದೇಶದಲ್ಲಿ ಅನುಮೋದನೆ ನೀಡಲಾಗಿರುತ್ತದೆ.